3. ವಿಶೇಷ ಘಟಕ ಯೋಜನೆ
4. ಗಿರಿಜನ ಉಪ ಯೋಜನೆ
5. ವಸತಿ ಕಾರ್ಯಾಗಾರ ಯೋಜನೆ
6. ಸುವರ್ಣ ವಸ್ತ್ರ ನೀತಿ ಯೋಜನೆ
7. ದುರ್ಬಲ ವರ್ಗಗಳಿಗೆ ಸೀರೆ ಪಂಚೆ ವಿತರಣಾ ಯೋಜನೆ
8. ಕೈಮಗ್ಗ ನೇಕಾರರಿಗೆ ಮಿತವ್ಯಯನಿಧಿ ಯೋಜನೆ
9. ಆರೋಗ್ಯ ವಿಮಾ ಯೋಜನೆ
10. ಗುಂಪು ವಿಮಾ ಯೋಜನೆ
11. ನೇಕಾರರ ಕಲ್ಯಾಣ ಯೋಜನೆ

ಆ) ಹೌದು

ಈ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಅನುದಾನದ ವಿವರ ಇಂತಿದೆ.

ರೂ.ಲಕ್ಷಗಳಲ್ಲಿ

ವರ್ಷ	ಕೇಂದ್ರ	ರಾಜ್ಯ	ಒಟ್ಟು
2008–09	803.98	6836.75	7640.73
2009–10	424.65	7560.29	7984.94
2010–11	309.18	11179.71	11488.89

ಬಿದರಿ – ಗುಣದಾಳ ರಸ್ತೆಗೆ ಸೇತುವೆ ನಿರ್ಮಾಣ

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್: ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿದರಿ–ಗುಣದಾಳ ರಸ್ತೆಯ ಮಧ್ಯದಲ್ಲಿ ಆಲಮಟ್ಟಿ ಹಿನ್ನೀರಿನಿಂದ ಇದ್ದ ಸಣ್ಣ ಸೇತುವೆಯು ಒಂದೂವರೆ ವರ್ಷಗಳ ಹಿಂದೆ ಸುರಿದ ಮಳೆಯಿಂದ ಕಿತ್ತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ , ಸಾರ್ವಜನಿಕರ ಅನುಕೂಲತೆ ಹಾಗೂ ಸಾಗಾಟಕ್ಕೆ ಈ ಸ್ಥಳದಲ್ಲಿ ಸೇತುವೆ ನಿರ್ಮಾಣಕ್ಕಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಪ್ರಸಕ್ತ ಸಾಲಿನಲ್ಲಿಯೇ ಸೇತುವೆ ನಿರ್ಮಿಸಲಾಗುವುದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) ಬಂದಿದೆ.

ಆ) ಸದರಿ ಸೇತುವೆ ನಿರ್ಮಾಣಕ್ಕಾಗಿ ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ಅರಿದಾಜು ಪತ್ರಿಕೆಯನ್ನು ತಯಾರಿಸಿದ್ದು, ನಿಗಮದ ತಾಂತ್ರಿಕ ಉಪ ಸಮಿತಿಯು

ಪ್ರಸ್ತಾವನೆಯನ್ನು ಪರಿಶೀಲಿಸಿ, ಆಲಮಟ್ಟಿ ಜಲಾಶಯದ ಮಟ್ಟವು ಏಫ್.ಆರ್.ಎಲ್. ಮಟ್ಟ 524.256 ಮೀ.ಗೆ ಎತ್ತರಿಸಿದಲ್ಲಿ ಈ ರಸ್ತೆಯ ಸಂಪರ್ಕ ಪಡೆಯುವ ಬಿದರಿ ಗ್ರಾಮವು ಮುಳುಗಡೆಯಾಗುವುದರಿಂದ, ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–2ರ ತೀರ್ಪು ಬರುವವರೆಗೆ ತಾತ್ಕಾಲಿಕವಾಗಿ ಪ್ರಸ್ತಾವನೆಯನ್ನು ತಡೆಹಿಡಿಲಾಗಿತ್ತು.

ಇ) ಈಗ ನ್ಯಾಯಾಧೀಕರಣದ ತೀರ್ಪು ಬಂದಿದ್ದು, ಆಲಮಟ್ಟಿ ಜಲಾಶಯದ ಎಫ್.ಆರ್.ಎಲ್. ಮಟ್ಟ 524.256ಮೀ.ವರೆಗೆ ಎತ್ತರಿಸಲು ಅನುಮತಿ ದೊರೆತಿದೆ, ಈ ಸಂಬಂಧ ಕೇಂದ್ರ ಸರ್ಕಾರದ ಅಂತಿಮ ಅಧಿಸೂಚನೆ ನಿರೀಕ್ಷಿಸಿದೆ, ಜಲಾಶಯದ ನೀರಿನ ಮಟ್ಟ ಕಡಿಮೆ ಆದಾಗ ಸಾಗುವಳಿ ಮಾಡಬಹುದಾದ ಕ್ಷೇತ್ರವು ಕೂಡ ಸಂಪರ್ಕ ಕಳೆದು ಕೊಳ್ಳುವುದರಿಂದ ಗುಣದಾಳ–ಬಿದರಿ ರಸ್ತೆಯನ್ನು ಜಲಾಶಯದ ಮಟ್ಟಕ್ಕಿಂತಲೂ ಎತ್ತರದ ಮಟ್ಟದಲ್ಲಿ ನಿರ್ಮಿಸಲು ಅಂದಾಜು ಪತ್ರಿಕೆಯನ್ನು ತಯಾರಿಸಿಕೊಳ್ಳಲಾಗಿದ್ದು, ನಿಗಮದ ತಾಂತ್ರಿಕ ಉಪ ಸಮಿತಿಯ ತೀರುವಳಿ ಪಡೆದುಕೊಂಡು ಶೀಘ್ರದಲ್ಲೇ ಸೇತುವೆಯನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಅರಣ್ಯ ಜಮೀನುಗಳ ಹಕ್ಕು ಪತ್ರ ಕೋರಿ ಬಂದಿರುವ ಅರ್ಜಿಗಳು

15 (5) ಶ್ರೀ ನರೇಂದ್ರ. ಆರ್.: ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006ರ ಅರಣ್ಯ ಹಕ್ಕು ಕಾಯ್ದೆಯಡಿ ಜಮೀನುಗಳ ಹಕ್ಕು ಪತ್ರ ಕೋರಿ ರಾಜ್ಯಾದ್ಯಂತ ಸಲ್ಲಿಸಿದ ಅರ್ಜಿಗಳೆಷ್ಟು;

ಆ) ಅವುಗಳಲ್ಲಿ ಎಷ್ಟು ಜನರಿಗೆ ಹಕ್ಕುಪತ್ರ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

ಇ) ಎಷ್ಟು ಜನರಿಗೆ ಹಕ್ಕುಪತ್ರ ಮಂಜೂರಾತಿ ನೀಡಲಾಗಿಲ್ಲ (ಜಿಲ್ಲಾವಾರು ವಿವರ ಒದಗಿಸುವುದು);

ಈ) ಉಳಿದ ಹಕ್ಕುಪತ್ರಗಳ ವಿತರಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):

ಅ) 1,60,305.00